### ಸುಪ್ರೀಂಕೋರ್ಟ್ ಆದೇಶ : 2010ರ ಮಂಗಳೂರು ವಿಮಾನ ದುರಂತ ಪ್ರಕರಣ

# ಮೃತನ ಕುಟುಂಬಕ್ಕೆ ₹7.6 ಕೋ. ಪರಿಹಾರ

ವಿಜಯವಾಣಿ ಸುದ್ದಿಜಾಲ ಮಂಗಳೂರು

ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಬಳಿ 2010 ಮೇ 22ರ ವಿಮಾನ ದುರಂತದಲ್ಲಿ ಮೃತಪಟ್ಟ ಮಂಗಳೂರು ನಗರದ ಮಹೇಂದ್ರ ಕೊಡ್ಕನಿ ಕುಟುಂಬಕ್ಕೆ 7.6 ಕೋಟಿ ರೂ. ಪರಿಹಾರ ನೀಡುವಂತೆ ಸುಪ್ರೀಂ ಕೋರ್ಟ್ ಆದೇಶಿಸಿದೆ. ಮಹೇಂದ್ರ ಕೊಡ್ಕನಿ ಪತ್ನಿ, ಪುತ್ರಿ ಹಾಗೂ ಪುತ್ರ ಈ ಮೊತ್ತವನ್ನು ವಾರ್ಷಿಕ ಶೇ.9 ಬಡ್ಡಿ ಸಮೇತ ಪರಿಹಾರ ಪಡೆಯಲಿದ್ದಾರೆ.

ಮಹೇಂದ್ರ ಕೊಡ್ಕನಿ ಯುಎಇ ಮೂಲದ ಕಂಪನಿಯೊಂದರಲ್ಲಿ ರೀಜನಲ್ ಡೈರೆಕ್ಟರ್ ಆಗಿದ್ದರು. ವಿಮಾನ ದುರಂತದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನಯಾನ ಸಂಸ್ಥೆ ಪರಿಹಾರ ನೀಡಿತ್ತು. ಈ ಪರಿಹಾರ ನ್ಯಾಯ ಸಮ್ಮತವಾಗಿಲ್ಲ ಎಂದು ಕೊಡ್ಕನಿ ಕುಟುಂಬಸ್ಥರು ರಾಷ್ಟ್ರೀಯ ಗ್ರಾಹಕ ವ್ಯಾಜ್ಯ ಪರಿಹಾರ ಆಯೋಗಕ್ಕೆ ದೂರು ಸಲ್ಲಿಸಿದ್ದರು. ಆಯೋಗ ಪರಿಹಾರ ಮೊತ್ತವನ್ನು



ಹೆಚ್ಚಿಸಿ 7.35 ಕೋಟಿ ರೂ. ವಾರ್ಷಿಕ ಶೇ.9 ಬಡ್ಡಿ ಸಮೇತ ನೀಡಬೇಕೆಂದು ಆದೇಶ ನೀಡಿತ್ತು. ಆದರೆ ವಿಮಾನಯಾನ ಸಂಸ್ಥೆ ಹೆಚ್ಚುವರಿ ಮೊತ್ತ ನೀಡದ ಕಾರಣ ಕುಟುಂಬಸ್ಥರು ಸುಪ್ರೀಂಕೋರ್ಟ್‌ನಲ್ಲಿ ದಾವೆ ಹೂಡಿದ್ದರು.

ಮಹೇಂದ್ರ ಕೊಡ್ಕನಿ ಉನ್ನತ ಹಾಗೂ ಆಕರ್ಷಕ ವೇತನದ ಹುದ್ದೆ ಹೊಂದಿದ್ದರು.

## ದುರಂತ ಸಂಭವಿಸಿ 10 ವರ್ಷ

ದುಬೈಯಿಂದ ಮಂಗಳೂರು ವಿಮಾನ ನಿಲ್ದಾಣಕ್ಕೆ 2010ರ ಮೇ 22ರಂದು ಬೆಳಗ್ಗೆ ಆಗಮಿಸಿದ ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನ ಲ್ಯಾಂಡಿಂಗ್ ವೇಳೆ ರನ್‌ವೇಯಿಂದ ಜಾರಿ ಕಂದಕಕ್ಕೆ ಉರುಳಿ ಅವಘಡಕ್ಕೀಡಾಗಿತ್ತು. 160 ಪ್ರಯಾಣಿಕರು ಹಾಗೂ 6 ಸಿಬ್ಬಂದಿ ಸಹಿತ 166 ಮಂದಿಯನ್ನು ವಿಮಾನ ಹೊತ್ತು ತಂದಿತ್ತು. ಈ ಪೈಕಿ ಎಲ್ಲ ಸಿಬ್ಬಂದಿ ಹಾಗೂ 158 ಪ್ರಯಾಣಿಕರು ಮೃತಪಟ್ಟು 8 ಮಂದಿ ಪವಾಡ ಸದೃಶವಾಗಿ ಬದುಕುಳಿದಿದ್ದರು.

ಅವರು ಪಡೆಯುತ್ತಿದ್ದ ವೇತನ ಪರಿಗಣಿಸಿ ಹೆಚ್ಚುವರಿ ಪರಿಹಾರ ನೀಡುವುದು ಸೂಕ್ತ ಎಂದು ಸುಪ್ರೀಂಕೋರ್ಟ್ ತೀರ್ಪು ನೀಡಿದೆ. ಮಂಗಳೂರು ವಿಮಾನ ದುರಂತದಲ್ಲಿ ಮೃತ ಪಟ್ಟವರ ಪೈಕಿ ಅತೀ ಹೆಚ್ಚು ಪರಿಹಾರ ಪಡೆದ ಪ್ರಕರಣವಿದು.